**BASAVARAJ BOMMAI**
Home Minister and Haveri,
Udupi, (Addl., charge)
District Incharge Minister

Room No. 327 & 327A
3rd Floor, Vidhana Soudha
Bengaluru-560 001
Ph: 080-22254661
11.07.2020 33439

No.HMO/315 / 2020

Date:...12.07.2020

**: ಪತ್ರಿಕಾ ಪ್ರಕಟಣೆ :**

ಇತ್ತೀಚಿನ ದಿನಗಳಲ್ಲಿ ಪೋಲಿಸ್ ಇಲಾಖೆಯ ಸಿಬ್ಬಂದಿಯವರಿಗೆ ಕರೋನ ಪಾಸಿಟಿವ್ ಹೆಚ್ಚಾಗುತಿರುವ ವಿಚಾರ ನಾವು ನೀವು ಗಮನಿಸುತ್ತಿದ್ದು ಕರೋನ ಸಂದರ್ಬದಲ್ಲಿ ನಮ್ಮ ರಾಜ್ಯದ ಪೊಲೀಸರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಿಂದೆ ಮೊದಲ 4 ತಿಂಗಳ ಲಾಕ್‌ಡೌನ್ ಸಂದರ್ಬದಲ್ಲಿ ಹಾಗೂ ಲಾಕ್‌ಡೌನ್ ತೆರವಾದ ನಂತರ ಪೊಲೀಸ್‌ರ ಜವಾಬ್ದಾರಿ ಹೆಚ್ಚಾಗಿರುತ್ತದೆ. ಸರ್ಕಾರದ ಆದೇಶದ ಅನ್ವಯ ಸಾರ್ವಜನಿಕರನ್ನು ನಿಯಂತ್ರಿಸುವಲ್ಲಿ ನಮ್ಮ ಪೊಲೀಸ್‌ರು ಯಶ್ವಸಿಯಾಗಿರುತ್ತಾರೆ.

ಕೋವಿಡ್-19 ಕೆಲಸದ ಜೊತೆಗೆ ಕಾನೂನು ಸುವ್ಯವಸ್ಥೆ ಹಾಗೂ ಅಪರಾಧ ನಿಯಂತ್ರಣವು ಅಷ್ಟೇ ಮಹತ್ವದಾಗಿದ್ದು ಆ ಕರ್ತವ್ಯದಲ್ಲೂ ಸಹ ಸಾರ್ವಜನಿಕರ ಹಾಗೂ ಅಪರಾಧಿಗಳ ಸಂಪರ್ಕ ಹೆಚ್ಚಾಗಿರುತ್ತದೆ. ಈಗಾಗಿ ಪೊಲೀಸ್‌ರ ಕಾರ್ಯ ವಿಧಾನದಲ್ಲಿ ಬದಲಾವಣೆ ತರುವುದು ಅನಿವಾರ್ಯವಾಗಿರುತ್ತದೆ.

ಈ ಕೆಳಕಂಡ ಸಲಹೆಗಳನ್ನು ಪರಿಣಿತರು, ಸಾರ್ವಜನಿಕರು, ಹಾಗೂ ಮಾಧ್ಯಮ ಸ್ನೇಹಿತರು ನೀಡಿರುತ್ತಾರೆ.

- ಕೂಡಲೇ ಆರೋಗ್ಯ ಭಾಗ್ಯದಡಿಯಲ್ಲಿ ಹಣವನ್ನು ಎಲ್ಲಾ ನಿಯೋಜಿತ ಆಸ್ಪತ್ರೆಗಳಿಗೆ ಬಿಡುಗಡೆ ಮಾಡಿ ಎಲ್ಲಾ ಆಸ್ಪತ್ರೆಗಳಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಪ್ರತ್ಯೇಕ ಚಿಕಿತ್ಸೆ ವ್ಯವಸ್ಥೆ ಮಾಡುವುದು.
- ಪ್ರತಿಯೊಬ್ಬ ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಸಿಫ್ಟ್ ಆಧಾರದ ಮೇಲೆ ಕರ್ತವ್ಯನಿರ್ವಹಿಸುವಂತೆ ಸೂಚಿಸುವುದು.
- ಪೊಲೀಸ್ ಠಾಣೆಗಳಲ್ಲಿ ಕೋವಿಡ್-19 ಹರಡುವ ಸ್ಥಳವಾಗಿರುವುದರಿಂದ ಅವಶ್ಯಕತೆಯಿರುವ ಸಿಬ್ಬಂದಿಗಳ ಮಾತ್ರ ನಿಯೋಜಿಸುವುದು.
- ಸಾರ್ವಜನಿಕರ ದೂರುಗಳನ್ನು ಆನ್‌ಲೈನ್‌ಗಳ ಮೂಲಕ ಸ್ವೀಕರಿಸಿ ದಾಖಲಾದ ದೂರುಗಳನ್ನು ವಿಚಾರಣೆ ಮಾಡುವುದು.
- 50 ವರ್ಷ ಮೇಲ್ಪಟ್ಟ ಸಿಬ್ಬಂದಿಗಳಿಗೆ ಮನೆಯಿಂದಲೇ ಕಾರ್ಯನಿರ್ವಹಿಸುವಂತೆ (ವರ್ಕ್ ಪ್ರಮ್ ಹೋಮ್) ಸೂಚಿಸುವುದು.

Scanned with CamScanner

**BASAVARAJ BOMMAI**
Home Minister and Haveri,
Udupi, (Addl., charge)
District Incharge Minister

Room No. 327 & 327A
3rd Floor, Vidhana Soudha
Bengaluru-560 001
Ph: 080-22254661
22033439

No.HMO/315 / 2020



Date:..12.07.2020

- ಕರ್ತವ್ಯ ಮುಗಿದ ನಂತರ ಸಿಬ್ಬಂಧಿ ಹಾಗೂ ಠಾಣೆಗಳನ್ನು ಸ್ವಚ್ಛಗೊಳಿಸುವ ವ್ಯವಸ್ಥೆ ಮಾಡುವುದು ಅದಕ್ಕಾಗಿ ಬೇಕಾಗುವ ಹಣಕಾಸಿನ ನೆರವು ನೀಡುವುದು.
- ಪೊಲೀಸ್ ಠಾಣೆಗಳಲ್ಲಿ ಸ್ವಾಗತಗಾರರ ಸ್ಥಳಗಳಲ್ಲಿ ಗಾಜಿನ ಕ್ಯಾಬಿನೆಟ್‌ಗಳನ್ನು ಅಳವಡಿಸಿ ದೂರುಗಳನ್ನು ಸ್ವೀಕರಿಸುವುದು.
- ಕೋವಿಡ್-19 ಆಸ್ಪತ್ರೆ ಹಾಗೂ ಸ್ಮಶಾನ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗಳಿಗೆ ಮಾಸ್ಕ್, ಹೆಡ್‌ಗ್ಲೆರ್, ಗ್ಲೌಸ್, ಹಾಗೂ ಪಿ.ಪಿ.ಇ. ಕಿಟ್‌ಗಳನ್ನು ನೀಡುವುದು.
- ಪೊಲೀಸ್ ಸಿಬ್ಬಂದಿಯ ರೋಗ-ನಿರೋಧಕ ಶಕ್ತಿಯನ್ನು ವೃದ್ಧಿಸಲು ಆಯುಷ್/ಆಯುರ್ವೇದಿಕ್ ಔಷಧಿಗಳನ್ನು ನೀಡಲು ಸೂಚಿಸುವುದು.

ಈ ಎಲ್ಲಾ ಮೇಲ್ಕಂಡ ಅಂಶಗಳನ್ನು ಹಿರಿಯ ಅಧಿಕಾರಿಗಳು ಕಟ್ಟುನಿಟಾಗಿ ಪಾಲಿಸುವಂತೆ ಸೂಚನೆಗಳನ್ನು ನೀಡಿರುತ್ತೇನೆ.

(ಬಸವರಾಜ ಬೊಮ್ಮಾಯಿ)

ಮಾನ್ಯ ಸಂಪಾದಕರು,
ಸುದ್ದಿ-ಮಾಧ್ಯಮಗಳು
ಹಾಗೂ ದಿನ ಪತ್ರಿಕೆಗಳು,
ಬೆಂಗಳೂರು.

Scanned with CamScanner